

ಮುದ್ದಾದ ಜೂಲು ಕೂದಲ ಪೊಮೆರೇನಿಯನ್ ನಾಯಿ ತಳಿಗೆ ಹೆಸರು ಬಂದಿದ್ದೇ ಈ ಪ್ರಾಂತ್ಯದಿಂದ. ಮೋಟ್ಲಾವಾ ನದಿ ಸಮುದ್ರ ಸೇರುವ ಜಾಗದ ಆಚೀಚೆ ಹರಡಿರುವ ಗದಾನ್ಸ್ಕ್, 10ನೇ ಶತಮಾನದ ಸುಮಾರಿಗೆ ಪೋಲೆಂಡ್ ದೇಶದ ರಾಜ ಮೀಜ್ಕೋ 1 ಎಂಬಾತನಿಂದ ಕಟ್ಟಲಾಗಿದ್ದು. ಕೆಲ ಶತಮಾನಗಳು ಜರ್ಮನ್ನರ ಅಡಿಯಲ್ಲಿ, ಕೆಲ ವರ್ಷಗಳು ಪೋಲೆಂಡ್ ಆಡಳಿತಕ್ಕೆ ಒಳಪಟ್ಟು, ಇನ್ನು ಕೆಲವಷ್ಟು ವರ್ಷಗಳು ಸ್ವತಂತ್ರವಾಗಿದ್ದ ಈ ನಗರಿ ವಿಶ್ವಯುದ್ಧದ ಸಮಯದಲ್ಲಿ ಬಹಳಷ್ಟು ತೊಂದರೆಗೊಳಗಾಗಿತ್ತು.

ಪಟ್ಟಣದ ಹಲವು ಭಾಗಗಳು ಆಕ್ರಮಣಕ್ಕೆ ಸಿಲುಕಿ ಯುದ್ಧಾನಂತರ ಮರುನಿರ್ಮಾಣಗೊಂಡವು. ಜರ್ಮನ್ನರ ಆಡಳಿತಕ್ಕೆ ಒಳಗಾಗಿದ್ದ ಸಮಯದಲ್ಲಿ ಈ ಊರಿಗೆ ಅವರಿತ್ತ ಹೆಸರು 'ಡಾನ್ ಝಿಗ್'.

ಬೆಳಿಗ್ಗೆ ಮನೆಯಿಂದ ಹೊರಬಿದ್ದ ನಾವು ನಿಧಾನವಾಗಿ ಗದಾನ್ಸ್ಕ್ ಬೀದಿಗಳಲ್ಲಿ ಅಡ್ಡಾಡಿದೆವು. ಈ ಬಾರಿ ನಮ್ಮ ಪ್ರವಾಸಕ್ಕೆ ಪುಟ್ಟ ಮಗಳು ಜೊತೆಯಾಗಿದ್ದರಿಂದ ಮೊದಲಿನಂತೆ ಬಿಡುವೇ ಕೊಡದೆ ಸುತ್ತುವುದು ಸಾಧ್ಯವಿರಲಿಲ್ಲ. ನಮ್ಮ ನಡಿಗೆ ಮಂದಗತಿಯಲ್ಲಿ ಸಾಗಿತ್ತು. ಎಲ್ಲೆಡೆ ಅರಳಿದ್ದ ಬಣ್ಣಬಣ್ಣದ ಹೂಗಳು ಆಕರ್ಷಕವಾಗಿದ್ದವು. ಅಲ್ಲಲ್ಲಿ ಕಲ್ಲು ಕೂರಿಸಿದ್ದ ಹಾದಿಗಳು, ಎರಡು ಮೂರು ಮಹಡಿಗಳಿಗಿಂತ ಹೆಚ್ಚಿಲ್ಲದ ಹಳೆಯ ಕಟ್ಟಡಗಳು, ನಡುವೆ ರೆಸ್ಟೋರೆಂಟ್‌ಗಳು ಕಂಡುಬಂದವು.

ಬೆಂಚುಗಳ ಮೇಲೆ, ಉದ್ಯಾನವನಗಳಲ್ಲಿ, ಕಾರಂಜಿಗಳ ಸಮೀಪದಲ್ಲಿ – ಹೀಗೆ ಎಲ್ಲೆಡೆ ಜನ ಗಡಿಬಿಡಿ ಇಲ್ಲದೆ ತೆಳುವಾಗಿ ಹರಡಿದ್ದ ಸೂರ್ಯನ ಬಿಸಿಲ ಶಾಖಕ್ಕೆ ಮೈಕೊಟ್ಟು ಕುಳಿತಿದ್ದರು. ಕೆಲವರ ಕೈಯಲ್ಲಿ ಪುಸ್ತಕ, ಇನ್ನು ಕೆಲವರು ಫೋನ್ ಹಿಡಿದುಕೊಂಡಿದ್ದರೆ, ಮತ್ತೆ ಕೆಲವರು ರಸ್ತೆಯಲ್ಲಿನ ಆಗುಹೋಗುಗಳನ್ನು ಗಮನಿಸುತ್ತಾ ಕುಳಿತಿದ್ದರು. ಎಲ್ಲೋ ಒಂದಿಬ್ಬರು ಈ ಲೋಕದ ಚಿಂತೆ ನಮಗೇಕೆ ಎನ್ನುವಂತೆ ಕಣ್ಣು ಮುಚ್ಚಿ ಧ್ಯಾನಸ್ಥರಾಗಿದ್ದರು.

ನಾವು 'ಬ್ರಿಜ್ ಆಫ್ ಲವ್' ಎಂದು ಕರೆಯುವ ಪುಟ್ಟ ಸೇತುವೆಯೊಂದಕ್ಕೆ ಬಂದೆವು. ಯೂರೋಪ್‌ನ ಹಲವೆಡೆ ಕಾಣುವಂತೆ ಇಲ್ಲಿಯೂ ತಮ್ಮ ಪ್ರೀತಿಯ ಸಂಕೇತವಾಗಿ ಅದೆಷ್ಟೋ ಜನ ಬೀಗಗಳನ್ನು ಸಿಕ್ಕಿಸಿದ್ದರು. ಹತ್ತಿರದಲ್ಲೇ ಸಂತ ಮೇರಿ ಚರ್ಚ್ ಇದ್ದು, ಇದು ಇಟ್ಟಿಗೆಗಳಿಂದ ಕಟ್ಟಲಾದ ಪ್ರಪಂಚದ ಅತೀ ದೊಡ್ಡ ಚರ್ಚ್ ಎಂದು ಹೇಳಲಾಗುತ್ತದೆ. ನಾವು ನಡೆಯುತ್ತಿದ್ದ ಕಾಲುದಾರಿ ಮುಂದೆ ದಲೂಗಿ ಟಾರ್ಗ್ ಅಥವಾ ಲಾಂಗ್ ಮಾರ್ಕೆಟ್ ಎಂದು ಕರೆಸಿಕೊಳ್ಳುವ ರಸ್ತೆಗೆ ಕೂಡಿಕೊಂಡಿತು. ಅಲ್ಲಿ ಮಾತ್ರ ಜನವೋ ಜನ. ಊರಿನ ಜನರೆಲ್ಲ ಅಲ್ಲೇ ಇದ್ದಾರೇನೋ ಎಂಬಂತೆ ಗಿಜಿಗುಡುತ್ತಿತ್ತು ಆ ಮಾರ್ಗ. ಅಲ್ಲಿನ ಮುಖ್ಯ ಆಕರ್ಷಣೆ ನೆಪ್ಚ್ಯೂನ್ ಫೌಂಟನ್.

ತ್ರಿಶೂಲ ಮಾದರಿಯ ಆಯುಧವನ್ನು ಹಿಡಿದ ಗ್ರೀಕ್ ದೇವತೆ ನೆಪ್ಚ್ಯೂನನ ಎತ್ತರ ಪ್ರತಿಮೆಯ ಸುತ್ತ ಕೆಲವಾರು ಕೆತ್ತನೆಗಳಿದ್ದು ಕಾರಂಜಿಯ ಅಂದ ಹೆಚ್ಚಿಸಿವೆ. ಇದರ ಹಿಂದೆಯೇ 'ಆರ್ಟುಸ್ ಕೋರ್ಟ್' ಎಂದು ಕರೆಯಲಾಗುವ, 14ನೇ ಶತಮಾನದಲ್ಲಿ ಕಟ್ಟಲಾದ, ಶ್ರೀಮಂತ ವ್ಯಾಪಾರಿಗಳು ಭೇಟಿಯಾಗುತ್ತಿದ್ದ ಕಟ್ಟಡವಿದೆ. ಕೊನೆಯಲ್ಲಿ 'ಗ್ರೀನ್ ಗೇಟ್' ಎಂದು ಕರೆಯಲಾಗುವ ಒಂದು ಪ್ರವೇಶ ದ್ವಾರವಿದೆ.


ಗ್ರೀನ್ ಗೇಟ್

